ಶ್ರೀ ಎಸ್. ಎಂ. ಕೃಷ್ಣ.—ಶನಿವಾರದ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಕಾಗೋಡು ತಿಮ್ಮಪ್ಪನವರ ಭಾಷಣ ಮುಗಿಯುವತನಕ ಕಡೆವರೆಗೂ ಸಭೆಯಲ್ಲೇ ಇದ್ದರು. ಆವರೆ ಆ ದಿನ ಮಾತ್ರ ಮಾನ್ಯ ಬಂಗಾರಪ್ಪನವರು ಮಾತ್ರ ಸಭೆಯಲ್ಲಿ ಬಹಳ ಹೊತ್ತು ಇದ್ದಂತೆ ಕಾಣಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೌದು, ಆ ದಿವಸ ಸಭೆಯಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರ ಜಾತೀಯತೆಯ ಭಾಷಣ ನಡೆಯುತ್ತಿತ್ತು. ಅದನ್ನು ಅವರು ಬಹಳ ಆಸಕ್ತಿಯಿಂದ ಕೇಳಲು ಉತ್ಸಾಹದಿದ್ದರು ಮತ್ತು ಅವರ ಭಾಷಣವನ್ನು ತಮ್ಮ ಅನುಕೂಲಕ್ಕೆ ಹೇಗೆ ಉಪಯೋಗವಾಗುತ್ತದೆ ಎಂಬುದನ್ನು ಅವರ ತಿಳಿದುಕೊಳ್ಳುತಕ್ಕ ಉದ್ದೇಶದಿಂದ ಕುಳಿತಿದ್ದರು...

A Question of Privilege

incorrect information given by the Chief Minister on 25-4-1974

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ : ಮೊನ್ನೆ ಇಲ್ಲಿ ಧರಣ ನಡೆದ ದಿವಸ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕ ಕಾಲದಲ್ಲಿ ಅವರು ಸಭೆಯನ್ನು ತಪ್ಪುದಾರಿಗೆ.....

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ : ಆದಿವಸ ಮಾನ್ಯ ಮುಖ್ಯ ಮಂತ್ರಿಗಳು ಏನು ಒಂದು ಪದವನ್ನು ಉಪಯೋಗ ಮಾಡಿದ್ದಾರೆ—ಅದರಿಂದ ಸಭೆಯ ಹಕ್ಕುಬಾಧ್ಯತೆಗೆ ಲೋಪ ಬಂದಿದೆ ಎಂದೇನು ಮಾನ್ಯ ಸದಸ್ಯರಿಂದ ಬಂಗಾರಪ್ಪನವರು ಒಂದು ನಿರ್ಣಯವನ್ನು ಕಳುಹಿಸಿದ್ದಾರೆ ಅದನ್ನು ಚರ್ಚೆಗೆ ಇಲ್ಲಿ ಅಂಗೀಕರಿಸಬೇಕಾಗಿದ್ದರೆ ಅದಕ್ಕೆ ಕೆಲವು ಶರತ್ತುಗಳಿವೆ. ಆದರೆ ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಉದ್ದೇಶಪೂರ್ವಕವಾಗಿ ಸಭೆಗೆ ಒಂದು ತಪ್ಪು ಕಲ್ಪನೆ ಬರಲಿ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಅವರು ಆ ಪದವನ್ನು ಉಪಯೋಗಮಾಡಲಿಲ್ಲ. ಯಾವ ಒಂದು ದುರುದ್ದೇಶ ಮತ್ತು ತಪ್ಪು ಕಲ್ಪನೆಯೂ ಇಲ್ಲದೆ ಮಾರವೆಯಲ್ಲಿ ಅವರು ಆ ಪದವನ್ನು ಉಪಯೋಗ ಮಾಡಿದ್ದಾರೆ. ಅವರ ಮನೋಭೂಮಿಕೆಯಲ್ಲಿ ಅಂಥ ಯಾವತಪ್ಪು ಕಲ್ಪನೆಗಳೂ ಇರಲಿಲ್ಲ. ಆದೊಂದು ಬೋನಾಫೈಡ್ ಮಿಸ್ಟೇಕ್. ಆದ್ದರಿಂದ ಅದನ್ನು ಇಷ್ಟಕ್ಕೇ ಮಾನ್ಯ ಸಭೆಯವರು ಕೈಬಿಡಬೇಕೆಂದು ಅತ್ಯಂತವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಮತ್ತು ಆ ಘಟನೆಯ ಬಗ್ಗೆ ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

BUDGET ESTIMATES for 1974–75 demands for Grants

Demand Nos. 3 and 31 *(Debate continued)*

†ಶ್ರೀ ಡಿ. ಕೆ. ನಾಯ್ಕರ್ (ನ್ಯಾಯಾಂಗ ಮತ್ತು ನಗರಾಡಳಿತ ಶಾಖೆಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ. ಈ ಸದನದ ಮುಂದೆ ಮಂಡಿಸಿರತಕ್ಕ ನನ್ನ ಎರಡು ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರೇನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಹಾಗೂ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವರೆಲ್ಲರಿಗೂ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸ ಬಯಸುತ್ತೇನೆ.

ಇನ್ನ ಅಡ್ಮಿನಿಷ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಮಾತನಾಡುತ್ತ ಮಾನ್ಯ ನಾಗಣ್ಣನವರು ಬೆಳಗಳೂರ್ಲೆರತಕ್ಕ ಕೋರ್ಟುಗಳಲ್ಲಿ ಸರಿಯಾಗಿ ಒಳ್ಳೇ ಹವಾಬರುವುದಕ್ಕೆ ಅವಕಾಶವಿರುವುದಿಲ್ಲ ವೆಂದೂ ಮತ್ತು ಕಟ್ಟಡಗಳು ಬಹಳ ಇಕ್ಕಟ್ಟಾಗಿ ಅಲ್ಲಿ ಬುತಕ್ಕ ಕಕ್ಷಿಗಾರರಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲವೆಂದೂ ಹೇಳಿದ್ದಾರೆ. ಅದೇ ರೀತಿಯಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ನಗರವಲ್ಲರತಕ್ಕ ಕೋರ್ಟ್ ಕಟ್ಟಡಗಳನ್ನು ಕುರಿತು ಅವು ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಕಟ್ಟಿಸಿದ ಕಟ್ಟಡಗಳೆ ಅವುಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲವಾದ್ದರಿಂದ ಅಲ್ಲಿ ಕೂಡ ಸರಿಯಾದ ಕಟ್ಟಡಗಳಿಂದು ಅವಶ್ಯಕತೆ ಬಳವಾಗಿದೆ ಎಂದು ಅವರು ಕೂಡ ಆ ಹಿಂದೆ ಸದಸ್ಯರವಾದವನ್ನು ಎತ್ತಿಹಿಡಿದಿದ್ದಾರೆ. ಅದೇ ರೀತಿ ಶ್ರೀ ಶ್ರೀರಾಮುಲುರವರು ಕೂಡ ಕೋರ್ಟಿಗೆ ಬರತಕ್ಕ ಕಕ್ಷಿಗಾರ ಕುಳಿತುಕೊಳ್ಳುವುದಕ್ಕೆ ಸರಿಯಾಗಿ ಸ್ಥಳವಿಲ್ಲವೆಂದೂ ಮತ್ತು ಕೇಸುಗಳು